5

## ಕರ್ನಾಟಕ ಸರ್ಕಾರದ ನಡೆವಳಿಗಳು

ವಿಷಯ:- ನೇರ ನೇಮಕಾತಿಯ ಮೂಲಕ ಆಯ್ಕೆಯಾದ ಕೃಷಿ ಅಧಿಕಾರಿಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಕುರಿತು.

**ಓದಲಾಗಿದೆ;**

1) ಆಯುಕ್ತರುಕೃಷಿ ಇಲಾಖೆ ಇವರ ಪತ್ರ ಸಂ: ಕೃಸಿಪ -5/ಪ.ಅ.ಘೋ/ಉ.ಕನ್ನಡ/ 101/2010-11, ದಿನಾಂಕ: 06-07-2011.
2) ಸರ್ಕಾರದ ಆದೇಶ ಸಂ:ಕೃಇ 152 ಕೃಪಸೇ 2011 ಬೆಂಗಳೂರು,ದಿನಾಂಕ:26-06-2012,
3) ಸಿ.ಬಿ.ಎಸ್.ಇ ಯಲ್ಲಿ ಪಾಸಾದ ಕೃಷಿ ಅಧಿಕಾರಿಗಳ ಮನವಿ ದಿನಾಂಕ:18-10-2012,

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ(2)ರ ಸರ್ಕಾರದ ಆದೇಶದಲ್ಲಿ ಸಿ.ಬಿ.ಎಸ್.ಇ ಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿದ ಕನ್ನಡ ಭಾಷೆ ವಿನಾಯಿತಿ ನಿಡುವ ವಿಚಾರದಲ್ಲಿ ಈ ಕೆಳಕಂಡ ಕೃಷಿ ಅಧಿಕಾರಿಯ ಪರಿವಿಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವುದನ್ನು ತಡೆ ಹಿಡಿಯಲಾಗಿತ್ತು.

| ಕ್ರ.ಸಂ | ಅಧಿಕಾರಿಯವರ ಹೆಸರು.ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಸೇವೆಗೆ ಸೇರಿದ ದಿನಾಂಕ | 2ವರ್ಷ ಪರಿವೀಕ್ಷಣಾ ಸೇವೆಯನ್ನು ಪೂರ್ಣಗೊಳಿಸಿದ ದಿನಾಂಕ | ಪರಿವೀಕ್ಷಣಾ ಅವಧಿಯನ್ನು ಘೋಷಿಸಬೇಕಾದ ದಿನಾಂಕ |
|---|---|---|---|---|
| 1) | ನಾಗರಾಜ ನಾಯ್ಕ. ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಶಿರಸಿ | 30-09-2008 ಪೂರ್ವಾಹ್ನ | 29-09-2010 ಅಪರಾಹ್ನ | 30-09-2010 ಪೂರ್ವಾಹ್ನ |

10ನೇ ತರಗತಿಯನ್ನು ಸಿ.ಬಿ.ಎಸ್.ಇ.ನಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿದ ಅಭ್ಯರ್ಥಿಗಳಲ್ಲಿ ಕೆಲವರು ಸರ್ಕಾರಕ್ಕೆ ಮನವಿ ಸಲ್ಲಿಸಿ ತಮ್ಮ ಹಾಗೆ ಸಿ.ಬಿ.ಎಸ್.ಸಿ.ಯಲ್ಲಿ ಕನ್ನಡವನ್ನು ಭಾಷಾ ವಿಷಯವನ್ನಾಗಿ ಅಭ್ಯಾಸ ಮಾಡಿ ಸರ್ಕಾರಿ ಸೇವೆಗೆ ಆಯ್ಕೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳಲ್ಲಿನ ಅಭ್ಯರ್ಥಿಗಳ ಖಾಯಂಪೂರ್ವಾವಧಿಯನ್ನು ಸದರಿ ಇಲಾಖೆಗಳು ತೃಪ್ತಿಕರವೆಂದು ಘೋಷಿಸಿರುವುದಾಗಿ ತಿಳಿಸಿ, Central Board of Secondary Education ನವರು ನಿಗಧಿ ಪಡಿಸಿರುವ ಪಠ್ಯಕ್ರಮದ ಪ್ರತಿ ನೀಡಿ, ತಮ್ಮ ಹಿರಿಯ ಅಧಿಕಾರಿಗಳು ತಮಗೆ ಕನ್ನಡ ಭಾಷಾ ಪರೀಕ್ಷೆಗೆ ವಿನಾಯಿತಿ ಪ್ರಮಾಣ ಪತ್ರ ನೀಡಿರುವುದರಿಂದ, ಅದರಂತೆ ತಮ್ಮಗಳ ಖಾಯಂಪೂರ್ವಾವಧಿಯನ್ನು ತೃಪ್ತಿಕರವೆಂದು ಘೋಷಿಸುವಂತೆ ಕೋರಿಕೊಂಡಿರುತ್ತಾರೆ.

--2--

ಸದರಿ ಅಭ್ಯರ್ಥಿಗಳು ಸಲ್ಲಿಸಿರುವ ಮನವಿಯಂತೆ ಪರಿಶೀಲಿಸಲಾಗಿ, 10ನೇ ತರಗತಿಯನ್ನು ಸಿ.ಬಿ.ಎಸ್.ಇ ನಲ್ಲಿ ಓದಿ ಕನ್ನಡ ಭಾಷೆಯನ್ನು ಒಂದು ವಿಷಯವನ್ನಾಗಿ ಅಭ್ಯಾಸ ಮಾಡಿದ ಅಭ್ಯರ್ಥಿಗಳ ಸಿ.ಬಿ.ಎಸ್.ಇ ಪಠ್ಯಕ್ರಮದಲ್ಲಿ ಕಾಲಂ 2.4 ರಲ್ಲಿನ ಸ್ಕೀಮ್ ಆಫ್ ಎಕ್ಸ್‌ಮಿನೇಷನ್‌ನಡಿ ಲಾಂಗ್ವೇಜ್-1, ಮತ್ತು ಲಾಂಗ್ವೇಜ್-2ಗಳಿಗೆ ಪ್ರತ್ಯೇಕವಾಗಿ ಒಂದೊಂದು ಪ್ರಶ್ನಾಪತ್ರಿಕೆಗಳನ್ನು 100 ಅಂಕಗಳಿಗೆ ಸೀಮಿತಗೊಳಿಸಿ ಮೂರು ಗಂಟೆಗಳ ಕಾಲಾವಕಾಶವನ್ನು ನಿಗದಿಪಡಿಸಿರುವುದನ್ನು ಮತ್ತು ಅವರ ಮೇಲಾಧಿಕಾರಿಯವರು ಸದರಿಯವರುಗಳಿಗೆ ಕನ್ನಡ ಭಾಷಾ ಪರೀಕ್ಷೆಗೆ ವಿನಾಯ್ತಿ ಪ್ರಮಾಣ ಪತ್ರ ನೀಡಿರುವುದನ್ನು ಪರಿಶೀಲಿಸಿ ಸಂಬಂಧಿಸಿದ ಮೇಲ್ಕಂಡ ಕೃಷಿ ಅಧಿಕಾರಿಯ 2 ವರ್ಷಗಳ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವೆಂದು ಘೋಷಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃಇ 48 ಕೃಪಸೇ 2013.**
**ಬೆಂಗಳೂರು ದಿನಾಂಕ:27-05-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃತೋಇ 91 ಕೃಪಸೇ 2006, ದಿನಾಂಕ: 30-08-2008 ಮತ್ತು 15-09-2008ಗಳಲ್ಲಿ ಕೃಷಿ ಅಧಿಕಾರಿಗಳ ವೃಂದಕ್ಕೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಈ ಕೆಳಕಂಡ ಕೃಷಿ ಅಧಿಕಾರಿಯ, ಕರ್ನಾಟಕ ನಾಗರೀಕ ಸೇವೆ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5(1)(ಎ) ರನ್ವಯ ಕಾಲಂ 5ರಲ್ಲಿ ಸೂಚಿಸಿರುವ ದಿನಾಂಕದಂದು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವೆಂದು ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

| ಕ್ರ.ಸಂ | ಅಧಿಕಾರಿಯವರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಸೇವೆಗೆ ಸೇರಿದ ದಿನಾಂಕ | 2ವರ್ಷ ಪರಿವೀಕ್ಷಣಾ ಸೇವೆಯನ್ನು ಪೂರ್ಣಗೊಳಿಸಿದ ದಿನಾಂಕ | ಪರಿವೀಕ್ಷಣಾ ಅವಧಿಯನು ಘೋಷಿಸಬೆ ದಿನಾಂಕ |
|---|---|---|---|---|
| 1) | ನಾಗರಾಜ ನಾಯ್ಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಶಿರಸಿ | 30-09-2008 ಪೂರ್ವಾಹ್ನ | 29-09-2010 ಅಪರಾಹ್ನ | 30-09-2 ಪೂರ್ವಾ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ,

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ-ಜಿಇ-5), ಹೊಸ ಕಟ್ಟಡ, ಕರ್ನಾಟಕ, ಬೆಂಗಳೂರು.

2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು. (ಮೂಲ ಪ್ರಮಾಣ ಪತ್ರಗದೊಂದಿಗೆ)
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4) ಸಂಬಂಧಪಟ್ಟ ಜಂಟಿ ಕೃಷಿ ನಿರ್ದೇಶಕರು/ ಸಹಾಯಕ ಕೃಷಿ ನಿರ್ದೇಶಕರು/ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ (ಕೃಷಿ ಆಯುಕ್ತರ ಮೂಲಕ)
5) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
6) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಸಹಾಯಕರಿಗೆ.
7) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
8) ಶಾಖಾ. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.